

## ಹೀಗೊಂದು ಸ್ವಚ್ಛತಾ ಅಭಿಯಾನ

ಶಿವರಾತ್ರಿಯ ವೇಳೆಗೆ ಧರ್ಮಸ್ಥಳಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಚಾರ್ಮಾಡಿ ಘಾಟಿಯ ಮೂಲಕ ಪ್ರತಿವರ್ಷ ಪಾದಯಾತ್ರೆ ಕೈಗೊಳ್ಳುತ್ತಾರೆ. ಈ ಬಾರಿಯೂ ಸಾವಿರಾರು ಯಾತ್ರಿಗಳು ಧರ್ಮಸ್ಥಳದತ್ತ ಹೆಜ್ಜೆ ಹಾಕಿದ್ದರು. ಯಾತ್ರಿಗಳು ತಾವು ತಂದ ಆಹಾರ, ನೀರಿನ ಬಾಟಲ್‌ಗಳನ್ನು ಚಾರ್ಮಾಡಿ ಘಾಟಿಯ ಹಾದಿಯಲ್ಲಿ ಬಿಸಾಡುವುದು ಪ್ರತಿವರ್ಷವೂ ಸಾಮಾನ್ಯ ಆಗಿತ್ತು. ಆದರೆ ಇದನ್ನು ತಡೆಯಲು ಈ ಬಾರಿ ಬೇರು–ಭೂಮಿ ಎನ್ನುವ ಸಂಸ್ಥೆಯು ‘ಪವಿತ್ರ ಹೆಜ್ಜೆ ಸ್ವಚ್ಛತಾ ಅಭಿಯಾನ’ ಹಮ್ಮಿಕೊಂಡಿತ್ತು.

ಬೇರುಭೂಮಿ ಸಂಸ್ಥೆಯು ಚಾರ್ಮಾಡಿ ಘಾಟಿಯ ರಸ್ತೆ ಬದಿಯ ಅಲ್ಲಲ್ಲಿ ನಾಮಫಲಕಗಳು ಹಾಗೂ ಸೆಣಬಿನ ಗೋಣಿಗಳನ್ನು ನೇತು ಹಾಕಿತ್ತು. ಅಲ್ಲದೆ, ನೀರಿನ ಬಾಟಲ್‌ಗಳನ್ನು, ಆಹಾರ ಪೊಟ್ಟಣದ ಕವರ್‌ಗಳನ್ನು ಈ ಗೋಣಿಗಳಲ್ಲೇ ಹಾಕಿ ಪರಿಸರ ಸ್ವಚ್ಛತೆ ಕಾಪಾಡಲು ಪಾದಯಾತ್ರಿಗಳಿಗೆ ಮನವಿ ಮಾಡಿತ್ತು. ಅದರಂತೆ ಯಾತ್ರಿಗಳೂ ಪೂರಕವಾಗಿ ಸ್ಪಂದಿಸಿದ್ದು, ಪ್ರಶಂಸನೀಯ.

ಸಾಕಷ್ಟು ಜನ ಪ್ರವಾಸಿಗರು ಘಾಟಿಯ ಹಾದಿಯಲ್ಲಿ ಪ್ಲಾಸ್ಟಿಕ್ ಕಸ ಬಿಸಾಡುತ್ತಾರೆ. ಇದರಿಂದ ಪರಿಸರ ಹಾಳಾಗುವ ಜೊತೆಗೆ ಕಸಗಳು ನೀರಿಗೆ ಸೇರಿ ಜಲ ಮಲಿನ ಆಗುತ್ತದೆ. ಇದನ್ನು ತಡೆಯಲು ಈ ರೀತಿಯ ಸ್ವಚ್ಛತಾ ಕ್ರಮಗಳು ಬಹಳ ಅಗತ್ಯವಾಗಿದೆ. ಈಗಲೂ ಗೋಣಿಗಳು ರಸ್ತೆ ಬದಿಯಲ್ಲಿ ಅಲ್ಲಲ್ಲಿ ಇದ್ದು, ಅವುಗಳಲ್ಲೇ ಕಸವನ್ನು ಹಾಕಬೇಕಾಗಿ ಪ್ರವಾಸಿಗರನ್ನು ಬೇರು–ಭೂಮಿ ಕೋರಿದೆ.

–ಅರುಣ್ ಕಿಲ್ಲೂರು

## ಕಾಪುವಿನ ಮಿನಿ ದೀಪಸ್ತಂಭ

ಉಡುಪಿ ಜಿಲ್ಲೆಯ ಕಾಪು ಹೆಸರೆತ್ತಿದರೆ ಅಲ್ಲಿನ ದೀಪಸ್ತಂಭ ಸ್ಮೃತಿ ಪಟಲದಲ್ಲಿ ಮೂಡುತ್ತದೆ. ಕಾಪು ಕಡಲ ತೀರದ ಬಂಡೆ ಮೇಲೆ 1901ರಲ್ಲಿ ಸುಮಾರು 27 ಮೀಟರ್ ಎತ್ತರದಲ್ಲಿ ನಿರ್ಮಿಸಿದ ದೀಪಸ್ತಂಭ ಅಂದು ಸಮುದ್ರ ಮಧ್ಯೆ ಅಪಾಯಕ್ಕೆ ಸಿಲುಕುವ ಹಡಗುಗಳಿಗೆ ದಡ ಸೂಚಿಸಿ ರಕ್ಷಣೆ ಒದಗಿಸುವ ಕಾಯಕ ಮಾಡುತ್ತಿತ್ತು. ಈಗ ಆ ಕೆಲಸವನ್ನು ಸ್ಯಾಟಲೈಟ್ ವ್ಯವಸ್ಥೆ ಮಾಡುತ್ತಿದೆ. ಹಡಗಿಗೆ ಭದ್ರತೆ ನೀಡುವ ಭೀಮ ಗಾತ್ರದ ರಚನೆಯ ದೀಪಸ್ತಂಭ, ಅದರಿಂದ ರಾತ್ರಿ ವೇಳೆ ಹೊರಹೊಮ್ಮುವ ಪ್ರಕಾಶಮಾನದ ಸೊಬಗು ಕಾಣಲು ಬರುವವರ ಸಂಖ್ಯೆ ಹೆಚ್ಚಿತ್ತು. ಇದು ದೀಪಸ್ತಂಭಕ್ಕೆ ರಾಷ್ಟ್ರೀಯ ಮಟ್ಟದ ಕೀರ್ತಿ ದೊರಕಿಸುವಲ್ಲಿ ಸಹಾಯಕವಾಯಿತು.

ಇದರ ಕೀರ್ತಿಗೆ ಗರಿ ಧರಿಸಿದಂತೆ ಇನ್ನೊಂದು ಮಿನಿ ದೀಪಸ್ತಂಭ ಕಾಪು ಪ್ರದೇಶದಲ್ಲಿ ಎದ್ದು ಕಾಣುತ್ತಿದೆ. ಇದು ಸಮುದ್ರ ಕಿನಾರೆಯಲ್ಲಿ ಅಲ್ಲ. ರಸ್ತೆ ಬದಿ ಇದೆ. ಇದು ಸ್ಥಾಪನೆಗೊಂಡಿರುವುದು ಹಡಗಿಗೆ ನೆರವು ನೀಡಲು ಅಲ್ಲ. ಬದಲಿಗೆ ರಸ್ತೆ ವಾಹನಗಳಿಗೆ ದಾರಿ ಸೂಚಿಸಲು. ಕಾಪು ಪಂಚಾಯಿತಿಯ ಪೊಲಿಪು ಪ್ರದೇಶದ ಸರ್ಕಲ್ ಫ್ರೆಂಡ್ಸ್ ಸಂಘ ಸಂಸ್ಥೆ ಇದನ್ನು ನಿರ್ಮಿಸಿದ್ದು, 125 ವರ್ಷ ಪೂರ್ತಿಗೊಳಿಸಲಿರುವ ಕಾಪು ದೀಪಸ್ತಂಭಕ್ಕೆ ಅದೇ ಊರಿನಲ್ಲಿ ಇನ್ನೊಂದು ಮಿನಿಯೇಚರ್ ನಿರ್ಮಾಣವಾಗಿರುವುದು ಪ್ರವಾಸಿಗರಿಗೆ ಒಂದಕ್ಕೆ ಇನ್ನೊಂದು ಫ್ರೀ ಆಫರ್‌ನಂತಿದೆ.

–ಕೆ. ರಾಮದಾಸ್ ಶೆಣೈ, ಕಾಸರಗೋಡು

